ಓ ಎಸ್ ನಂಃ 200-17
ಡಿ ಡಬ್ಲ್ಯೂ ಃ 1

ದಿಃ 02-03-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಶ್ರೀ ಟಿ ಎಸ್ ಆರ್ ವಕೀಲರಿಂದ

24. ನನ್ನ ತಂದೆ ದಿನಾಂಕಃ 02-08-2017 ರಂದು ತೀರಿಕೊಂಡಿರುತ್ತಾರೆ. ದಿನಾಂಕಃ 02-08-2017 ರ ಮೊದಲು ನನ್ನ ತಂದೆ ದಾವಾ ಆಸ್ತಿಯ ಸ್ವಾಧೀನತೆ ಹೊಂದಿದ್ದರು ಎಂದು ತೋರಿಸಲು ನ್ಯಾಯಾಲಯದಿಂದ ನೊಂದಣಿಯಾದ ದಾಖಲೆಯಿರುತ್ತದೆ ಎಂದು ಹೇಳುತ್ತಾರೆ. ನಾನು ಹೇಳುತ್ತಿರುವ ದಾಖಲೆ ನಿಡಿ 14 ಆಗಿರುತ್ತದೆ ಎಂದರೆ ನಿಜ.ಸಾಕ್ಷಿಗೆ ಈಗ ನಿಡಿ 14 ನ್ನುತೋರಿಸಲಾಗಿ ಅದರಲ್ಲಿ ಸ್ವಾಧೀನತೆಯ ಬಗ್ಗೆ ಒಕ್ಕಣೆ ಇರುತ್ತದೆಯಾ ಎಂದರೆ 4 ನೇ ಪುಟದಲ್ಲಿ ಒಕ್ಕಣೆ ಇರುತ್ತದೆ ಎಂದು ಹೇಳುತ್ತಾರೆ. ನಿಡಿ14 ನ್ನು ಹೊರತುಪಡಿಸಿ ಸ್ವಾಧೀನತೆಯ ಬಗ್ಗೆ ನನ್ನ ಕಡೆ ನ್ಯಾಯಾಲಯದಿಂದ ಆದ ಡಿಕ್ರಿ ಇರುತ್ತದೆ. ದಿನಾಂಕಃ 05-01-2017 ರಲ್ಲಿ ದಾವಾ ಆಸ್ತಿಯ ಸ್ವಾಧೀನತೆ 1 ನೇ ಪ್ರತಿವಾದಿಯ ಕಡೆ ಇರುತ್ತದೆ. ದಿನಾಂಕಃ 05-01-2017 ರಲ್ಲಿ 1 ನೇ ಪ್ರತಿವಾದಿ ನಮಗೆ ದಾವಾ ಆಸ್ತಿಯ ಸ್ವಾಧೀನತೆಯನ್ನು ಬಿಟ್ಟುಕೊಟ್ಟಿರುವುದಿಲ್ಲ. ದಿನಾಂಕಃ 08-08-2016 ರಂದು ವಾದಿಗೆ ನ್ಯಾಯಾಲಯ ಸ್ವಾಧೀನತೆ ಬಿಟ್ಟುಕೊಟ್ಟಿರುತ್ತೆ ಎಂದರೆ ಸರಿಯಲ್ಲ. ದಿನಾಂಕಃ 05-01-2017 ರಂದು ದಾವಾ ಆಸ್ತಿಯ ಸ್ವಾಧೀನತೆಯನ್ನು 1 ನೇ ಪ್ರತಿವಾದಿಯಾಗಲೀ, ನ್ಯಾಯಾಲಯವಾಗಲೀ, ಅಥವಾ ನ್ಯಾಯಾಲಯದ ಸಿಬ್ಬಂದಿಗಳಾಗಲೀ ಇರಲಿಲ್ಲ ಎಂದರೆ ನಾವು ಇದ್ದೆವು ಎಂದು ಹೇಳುತ್ತಾರೆ.

25. ನಾವು ದಾವೆಯನ್ನು ದಿನಾಂಕಃ 07-02-2013 ರಂದು ಹೂಡಿರುತ್ತೇವೆ ಎಂದರೆ ನಿಜ. ಅಷ್ಟರಲ್ಲಿ ವಾದಿ ದಿನಾಂಕಃ 03-08-2012 ರಲ್ಲಿ ದಾವೆ ಹೂಡಿದ್ದರು ಎಂದರೆ ಸರಿಯಲ್ಲ. ನಾನು ದಾವೆಹೂಡುವಷ್ಟರಲ್ಲಿ ವಾದಿ ದಾವಾ ಆಸ್ತಿಯ ಮೇಲೆ ದಾವೆ ಹೂಡಿದ್ದರು ಎಂದರೆ ಸರಿಯಲ್ಲ. ನಾನು ದಾವೆ ಹೂಡುವಾಗ ವಾದಿ 1 ನೇ ಪ್ರತಿವಾದಿಯ ವಿರುದ್ದ ದಾವೆ ಹೂಡಿರುವ ಬಗ್ಗೆ ನನ್ನ ಗಮನದಲ್ಲಿತ್ತು ಎಂದರೆ ಸರಿಯಲ್ಲ. ಈ ವಿಷಯ ನನಗೆ ಗೊತ್ತಿದ್ದರೂ ಸಹ ನಾವು ಹೂಡಿದ ದಾವೆಯಲ್ಲಿ, ವಾದಿ ಹೂಡಿದ ದಾವೆಯ ಬಗ್ಗೆ ನ್ಯಾಯಾಲಯಕ್ಕೆ ಗಮನಕ್ಕೆ ತಂದಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಸರ್ವೆ ನಂ 62/1 ಎ ರ ಪಹಣಿ ಮತ್ತು ಮ್ಯುಟೇಷನ್ ದಾಖಲೆಯನ್ನು ತೋರಿಸಲಾಗಿ ಅದು ದಾವಾ ಆಸ್ತಿಗೆ ಸಂಬಂದಿರುತ್ತದೆ ಎಂದರೆ ಸರಿಯಲ್ಲ, ಅದನ್ನು ಸೃಷ್ಟಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ದಾವಾ ಆಸ್ತಿಯ ಪಹಣಿ ಮತ್ತು ಮ್ಯುಟೇಷನ್ ನನ್ನು ಯಾವಾಗ ಸೃಷ್ಟಿ ಮಾಡಿರುತ್ತಾರೆ ನನಗೆ ಗೊತ್ತಿಲ್ಲ, ಆದರೆ ಕೊರೋನಾ ಸಮಯದಲ್ಲಿ ಸೃಷ್ಟಿ ಮಾಡಲಾಗಿದೆ ಎಂದು ಹೇಳುತ್ತಾರೆ. ದಾವಾ ಆಸ್ತಿಯ ಖಾತೆ ಮತ್ತು ಪಹಣಿ ವಾದಿಯ ಹೆಸರಿಗೆ ಬಂದಿರುವುದು ನನಗೆ 3 ವರ್ಷಗಳ ಹಿಂದೆ ಗೊತ್ತಾಗಿರುತ್ತದೆ ಎಂದರೆ ಯಾವಾಗ

ಗೊತ್ತಾಗಿರುತ್ತದೆ ಗೊತ್ತಿಲ್ಲ ಎಂದು ಹೇಳುತ್ತಾರೆ. ವಾದಿ ದಾವಾ ಆಸ್ತಿಯ ಖಾತೆ ಮತ್ತು ಪಹಣಿಯನ್ನು ಸೃಷ್ಟಿ ಮಾಡಿರುತ್ತಾರೆ ಎಂದು ಹೇಳುವ ಬಗ್ಗೆ ತಹಶೀಲ್ದಾರ್ ಅಥವಾ ಪೋಲಿಸ್ ಠಾಣೆಯಲ್ಲಿ ದೂರನ್ನು ದಾಖಲು ಮಾಡಿದ್ದೀರಾ ಎಂದರೆ ನ್ಯಾಯಾಲಯಕ್ಕೆ ಬಂದಿರುತ್ತೇವೆ ಎಂದು ಹೇಳುತ್ತಾರೆ. ದಾವಾ ಆಸ್ತಿಗೂ ಮತ್ತು 4 ನೇ ಪ್ರತಿವಾದಿಗೂ ಯಾವುದೇ ಸಂಬಂದ ಇರುವುದಿಲ್ಲ. ನಾನಾಗಲೀ, ನನ್ನ ತಂದೆಯಾಗಲೀ ದಾವಾ ಆಸ್ತಿಯ ಸ್ವಾಧೀನತೆಯನ್ನು ಹೊಂದಿರುವುದಿಲ್ಲ, ದಿನಾಂಕಃ 08-08-2016 ರಿಂದ ವಾದಿಯೇ ದಾವಾ ಆಸ್ತಿಯ ಸ್ವಾಧೀನತೆ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ವಾದಿಯೇ ದಾವಾ ಆಸ್ತಿಯ ಮಾಲೀಕರು ಆಗಿರುತ್ತಾರೆ ಎಂದರೆ ಸರಿಯಲ್ಲ. ವಾದಿಗೆ ಆದ ಕ್ರಯದ ಕರಾರು ಪತ್ರ ಆದ ನಂತರ ನಾವು ಹಾಗೂ 1 ನೇ ಪ್ರತಿವಾದಿ ಸೇರಿ ನಿಪಿ 18 ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**